ಸೆಪ್ಟೆಂಬರ್ 1995 ರಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಆ) ಸುಜ್ಜಲೂರು ಕೆರೆ: ಕಾಮಗಾರಿಯನ್ನು ಟೆಂಡರ್ ಮುಖಾಂತರ ವಹಿಸಲಾಗಿದೆ. ಕಾಮಗಾರಿ ಪ್ರಗತಿಯಲ್ಲಿದ್ದು 1995-96ರ ಸಾಲಿನ ಅಂತ್ಯದ ವೇಳೆಗೆ ಮುಗಿಸಲು ಯೋಜಿಸಲಾಗಿದೆ.

ಇ) ಕಡಿವಾಗಿಲು ಕೆರೆ: ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ. ಟೆಂಡರ್ ಪ್ರಕ್ರಿಯೆಗಳನ್ನು ಮಾಡಲಾಗುತ್ತಿದೆ. ಕಾಮಗಾರಿಯನ್ನು ಈಗ ಸದ್ಯದಲ್ಲಿ ಕೈಗೆತ್ತಿಕೊಂಡು 1996ರ ಆಗಸ್ಟ್ ಅಂತ್ಯದ ಒಳಗೆ ಮುಗಿಸಲು ಉದ್ದೇಶಿಸಿದೆ.

ಇ) ಟೆಂಡರ್ ಕರೆಗಳು ನಿರರ್ಥಕವಾದುದರಿಂದ ಹಾಗೂ ಗುತ್ತಿಗೆದಾರರು ನಿರೀಕ್ಷಿಸಿದ ಪ್ರಗತಿಯನ್ನು ನೀಡದ ಕಾರಣ ಕಾಮಗಾರಿಯನ್ನು ಮುಗಿಸಲು ತಡವಾಗಿರುತ್ತದೆ. ಈ ಮುಂಗಾರು ಮುಗಿದ ನಂತರ ಕಾಮಗಾರಿಯನ್ನು ತೀವ್ರಗತಿಯಲ್ಲಿ ಮುಂದುವರಿಸಲಾಗುವುದು.

ಆ) ಸುಜ್ಜಲೂರು ಕೆರೆ : 1995-96 ರ ಸಾಲಿನ ಅಂತ್ಯದ ವೇಳೆಗೆ ಮುಗಿಸಲು ಉದ್ದೇಶಿಸಿದೆ.

ಆ) ಯಾಲದಹಳ್ಳಿ ಕೆರೆ : 1996-97 ರ ಅಂತ್ಯದ ವೇಳೆಗೆ ಮುಗಿಸಲು ಉದ್ದೇಶಿಸಿದೆ.

ಇ) ಕಡಿವಾಗಿಲು ಕೆರೆ : 1996 ರ ಆಗಸ್ಟ್ ಅಂತ್ಯದ ಒಳಗೆ ಮುಗಿಸಲು ಉದ್ದೇಶಿಸಿದೆ.

ವಿಷಯ: ಮಂಡ್ಯ ಜಿಲ್ಲೆಯ ಚಂದೂಪುರ ಮತ್ತು ಮುತ್ತತ್ತಿಗಳಲ್ಲಿ ಪೋಲೀಸ್ ಔಟ್ ಪೋಸ್ಟ್ ಠಾಣೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1609 (1916)

ಶ್ರೀ ಕೆ.ಎನ್.ನಾಗೇಗೌಡ, (ಕಿರುಗಾವಲು):- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ಮಂಡ್ಯ ಜಿಲ್ಲೆಯ ಚಂದೂಪುರ ಮತ್ತು ಮುತ್ತತ್ತಿಗಳಲ್ಲಿ ಅಪರಾಧಿಗಳ ಸಂಖ್ಯೆ ಜಾಸ್ತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ಅಂಕಿ ಅಂಶಗಳನ್ನು ಒದಗಿಸುವುದು)

ಆ) ಬಂದಿದ್ದರೆ ಹೊರವಲಯ ಠಾಣೆ (ಔಟ್ ಪೋಸ್ಟ್ ಸ್ಟೇಷನ್) ಮಾಡಲು ಕ್ರಮವನ್ನು ತೆಗೆದುಕೊಳ್ಳಲಾಗುವುದೆ?

ಇ) ಮುತ್ತತ್ತಿಯಲ್ಲಿ ಎಲ್.ಟಿ.ಟಿ.ಯವರು ಬಂದಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು):-

ಆ) ಹೌದು. ಅಂಕಿ ಅಂಶಗಳು ಈ ಕೆಳಕಂಡಂತಿದೆ:

ಊರು	1993		1994		1995	
	ವರದಿ	ಆರೋಪಿ	ವರದಿ	ಆರೋಪಿ	ವರದಿ	ಆರೋಪಿ
ಚಂದೂಪುರ	1	1	5	15	4	11
ಮುತ್ತತ್ತಿ	1	2	2	9	6	17

ಆ) ಕೆ.ಎಂ. ದೊಡ್ಡಿ ಪೋಲೀಸ್ ಠಾಣೆ ವ್ಯಾಪ್ತಿಯಲ್ಲಿರುವ ಚಂದೂಪುರಕ್ಕೆ ಹೊರವಲಯ ಠಾಣೆಯ ಅವಶ್ಯಕತೆ ಕಂಡು ಬರುವುದಿಲ್ಲ. ಆದರೆ ಮುತ್ತತ್ತಿಯಲ್ಲಿ ಪೋಲೀಸ್ ಹೊರವಲಯ ಠಾಣೆ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಇ) 1992ರ ನಂತರ ಮುತ್ತತ್ತಿಯಲ್ಲಿ ಎಲ್.ಟಿ.ಟಿ.ಇ ಯವರ ಚಟುವಟಿಕೆ ಕಂಡು ಬಂದಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ವಿಷಯ: ಮಂಡ್ಯ ಜಿಲ್ಲಾ ಮಳವಳ್ಳಿ ತಾಲ್ಲೂಕಿನಲ್ಲಿ ಪಿಕಪ್‌ಗಳು ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1610 (1907)

ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲಾ ಮಳವಳ್ಳಿ ತಾಲ್ಲೂಕಿನಲ್ಲಿ ದುಗ್ಗನಹಳ್ಳಿ ಪಿಕಪ್, ಖಿಡಕೇಗೌಡ್ನ ದೊಡ್ಡಿ ಪಿಕಪ್ ಶೆಟ್ಟಿಹಳ್ಳಿ ಪಿಕಪ್ ಯಾವ ಹಂತದಲ್ಲಿದೆ?

ಆ) ಪ್ರಾರಂಭವಾದದ್ದು ಹಾಗೂ ಮುಕ್ತಾಯವಾಗುವುದು ಯಾವಾಗ, ಹಾಗಿದ್ದಲ್ಲಿ ವಿಳಂಬಕ್ಕೆ ಕಾರಣವೇನು?

ಇ) ತಡವಾಗಿರುವುದಕ್ಕೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು):-

ಅ) 1) ದುಗ್ಗನಹಳ್ಳಿ ಪಿಕಪ್ ಕೆಲಸಗಳು ಪ್ರಗತಿಯಲ್ಲಿದೆ. ಉಳಿಕೆ ಕಾಮಗಾರಿಗಳನ್ನು ಟೆಂಡರ್ ಆಧಾರದ ಮೇಲೆ ಕೈಗೆತ್ತಿಕೊಂಡು 95-96ನೇ ಸಾಲಿನಲ್ಲಿ ಮುಗಿಸಲಾಗುವುದು.

2)ಖಿಡಕೇಗೌಡನ ದೊಡ್ಡಿ ಪಿಕಪ್ ಮಂಜೂರಾಗಿದ್ದು 96-97ನೇ ಸಾಲಿನಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.

3) ಶೆಟ್ಟಿಹಳ್ಳಿ ಪಿಕಪ್ ಮುಗಿಯುವ ಹಂತದಲ್ಲಿದೆ.

ಆ) 1) ದುಗ್ಗನಹಳ್ಳಿ ಪಿಕಪ್ ಕಾಮಗಾರಿಗಳನ್ನು 92-93ನೇ ಸಾಲಿನಲ್ಲಿ ಪ್ರಾರಂಭಿಸಲಾಗಿದ್ದು 95-96ರಲ್ಲಿ ಮುಗಿಸಲಾಗುವುದು.

2) ಖಿಡಕೇಗೌಡನದೊಡ್ಡಿ ಪಿಕಪ್ ಅಂದಾಜು ಪಟ್ಟಿ 95-96ನೇ ಸಾಲಿನಲ್ಲಿ ಮಂಜೂರಾಗಿದ್ದು ಟೆಂಡರ್ ಆಧಾರದ ಮೇಲೆ ಕೈಗೆತ್ತಿಕೊಂಡು 96-97ನೇ ಸಾಲಿನಲ್ಲಿ ಮುಗಿಸಲಾಗುವುದು.

3) ಕೆ.ಶೆಟ್ಟಿಹಳ್ಳಿ ಪಿಕಪ್ ಮುಗಿಯುವ ಹಂತದಲ್ಲಿದೆ.

ಇ) ಪರಿಶೀಲಿಸಲಾಗುವುದು.

ವಿಷಯ: ವಿಶ್ವೇಶ್ವರಯ್ಯ ನಾಲೆಗೆ ಲಿಂಕ್ ಕಾಲುವೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1611 (1910)

ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶ್ವೇಶ್ವರಯ್ಯ ನಾಲೆಗೆ ಲಿಂಕ್ ಕಾಲುವೆ ತೆಗೆಯಲಾಗುತ್ತಿದೆಯಾಗಿ ಹಾಗಿದ್ದಲ್ಲಿ ಈ ಕೆಲ್ಸವನ್ನು ಯಾರಿಗೆ ವಹಿಸಲಾಗಿದೆ? (ವಿವರಗಳನ್ನು ಕೊಡುವುದು).

ಆ) ಲಿಂಕ್ ಕಾಲುವೆ, (ಟನಲ್ ಆರ್ಕ್‌ವರ್ಕ್‌ಗಳ ಕೆಲಸದಲ್ಲಿ ಸಾಕಷ್ಟು) ಹಣ